[ Govt. of Karnataka C.R.P. 67]

| |
|---|
| Deposition Sheets (RP.No.57) Form No.4 |

**IN THE COURT OF ADDL. CIVIL JUDGE & J.M.F.C., KARKALA.**

**Criminal Case No. 247/2022**

ಪಿಡ್ಲ್ಯೂಃ 5 ಸಿಡ್ಲ್ಯೂಃ 9

ಸಾಕ್ಷಿದಾರಳ ಹೆಸರು : ಆಸಿಯಾ ಬಾನು

ಗಂಡನ ಹೆಸರು : ಸಯ್ಯದ್ ಜಲೀಲ್

ಪ್ರಾಯ : 50 ವರ್ಷ

ಉದ್ಯೋಗ : ಗೃಹಿಣಿ

ವಾಸ : ತೆಳ್ಳಾರು

ದಿನಾಂಕ 22.08.2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆಃ ಸಹಾಯಕ ಸರ್ಕಾರಿ ಅಭಿಯೋಜಕರುಃ-

ಈ ದಿನ ನ್ಯಾಯಾಲಯದ ಮುಂದೆ ಇರುವ ಅರೋಪಿತರನ್ನು ನೋಡಿ ಗುರುತಿಸಿದ್ದೇನೆ. 1 ನೇ ಆರೋಪಿ ನನ್ನ ಗಂಡ, 2 ನೇ ಆರೋಪಿ ನನ್ನ ಮಗ.

ಆರೋಪಿಗಳು ದನಗಳನ್ನು ಕಡಿದು ಬಕೆಟ್ ನಲ್ಲಿ ಹಾಕಿ ಮನೆಯ ಬಾತ್ ನಲ್ಲಿ ಇಟ್ಟಿರುವುದು ಗೊತ್ತಿಲ್ಲ. ನನ್ನ ಮನೆಗೆ ಪೊಲೀಸರು ಬಂದು ವಿಚಾರಣೆ ಮಾಡಿರುವುದಿಲ್ಲ. ನಾನು ಪೊಲೀಸರಿಗೆ ಇದ್ದ ವಿಚಾರವನ್ನು ತಿಳಿಸಿರುವುದಿಲ್ಲ. ಸ್ವತ್ತುಗಳನ್ನು ಪೊಲೀಸರಿಗೆ ಹಾಜರುಪಡಿಸಿರುವುದಿಲ್ಲ, ನನ್ನ ಸಮಕ್ಷಮ ಪೊಲೀಸರು ಮಹಜರು ಮಾಡಿರುವುದಿಲ್ಲ , ಸಹಿಯನ್ನು ಪಡೆದುಕೊಂಡಿರುವುದಿಲ್ಲ. ಈಗ ನಾನು ನೋಡಿದ ದಾಖಲೆಯಲ್ಲಿ ನನ್ನ ಸಹಿ ಇದೆ . ಸದ್ರಿ ದಾಖಲೆಯನ್ನು ಈಗಾಗಲೇ ನಿಪಿ-2 ಎಂದು ಗುರುತಿಸಲಾಗಿದೆ. ಸಾಕ್ಷಿ ಒಪ್ಪಿದ ಮೇರೆಗೆ ಸಾಕ್ಷಿಯ ಸಹಿಯನ್ನು ನಿಪಿ-2(ಇ) ಎಂದು ಗುರುತಿಸಲಾಯಿತು. ಆರೋಪಿಗಳ

ವಿರುದ್ದ ಪ್ರಕರಣ ದಾಖಲಾಗಿರುವ ವಿಚಾರ ನನಗೆ ಗೊತ್ತಿಲ್ಲ. ನಿಪಿ-3 ರಿಂದ 5 ಭಾವಚಿತ್ರಗಳನ್ನು ಯಾವ ಉದ್ದೇಶಕ್ಕೆ ತೆಗೆದಿರುತ್ತಾರೆ ಎಂದು ಗೊತ್ತಿಲ್ಲ. ನ್ಯಾಯಾಲಯದ ಮುಂದೆ ಇರುವ ಮೂ ಮಾ-1 ರಿಂದ 4 ನ್ನು ನೋಡಿ ಗುರುತಿಸಿರುವುದಿಲ್ಲ.

(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಸಸಅ ರವರು ಅನುಮತಿ ಕೋರಿರುತ್ತಾರೆ. ಅನುಮತಿ ನೀಡಲಾಯಿತು)

<u>ಪಾಟೀ ಸವಾಲುಃ ಸಹಾಯಕ ಸರ್ಕಾರಿ ಅಭಿಯೋಜಕರುಃ-</u>

2. ದಿಃ03.02.2021 ರಂದು ಬೆಳಿಗ್ಗೆ ನನ್ನಗಂಡ 1 ನೇ ಆರೋಪಿ ಮತ್ತು ನನ್ನ ಮಗ 2 ನೇ ಆರೋಪಿ ಎಲ್ಲಿಂದಲೊ ದನಗಳನ್ನು ಕಡಿದು ಮಾಂಸ ಮಾಡಿ ಬಕೆಟ್ ನಲ್ಲಿ ಹಾಕಿ ಮನೆಯ ಬಾತ್ ರೂಮ್ ನ ಬಳಿ ತಂದು ಇಟ್ಟಿದ್ದರು ಎಂದರೆ ಸರಿಯಲ್ಲ. ಬೆಳಿಗ್ಗೆ ಸಮಯ ಸುಮಾರು 8.30 ಗಂಟೆಗೆ ಪೊಲೀಸರು ನಮ್ಮ ಮನೆಗೆ ಬಂದಿದ್ದು 1 ಮತ್ತು 2 ನೇ ಆರೋಪಿಗಳು ಅವರನ್ನು ನೋಡಿ ಹಾಡಿಯಲ್ಲಿ ಓಡಿ ಹೋದರು ಎಂದರೆ ಸರಿಯಲ್ಲ. ಪೊಲೀಸರು ನನ್ನನ್ನು ವಿಚಾರಿಸಿದ್ದು ನಾನು ಇದ್ದ ವಿಚಾರವನ್ನು ಹೇಳಿ ಆರೋಪಿಗಳು ತಂದಿರಿಸಿದ ಮಾಂಸ ತುಂಬಿದ ಬಕೆಟ್ ಗಳನ್ನು ಹಾಗೂ ಮಾಂಸ ತುಂಡು ಮಾಡಲು ಉಪಯೋಗಿಸಿದ ಮು ಮಾ-1 ರಿಂದ 4 ಹಾಜರುಪಡಿಸಿರುತ್ತೇನೆ ಎಂದರೆ ಸರಿಯಲ್ಲ. ಸದ್ರಿ ಎಲ್ಲಾ ಸ್ವತ್ತುಗಳನ್ನು ಪೊಲೀಸರು ಮಹಜರು ಮುಖೇನ ಸ್ವಾ ಧೀನಪಡಿಸಿಕೊಂಡಿದ್ದು ಸದ್ರಿ ಮಹಜರಿಗೆ ನಾನು ಸಹಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಆರೋಪಿಗಳ ವಿರುದ್ದ ಕಾರ್ಕಳ ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾದ ವಿಷಯ ನನಗೆ ತಿಳಿದಿರುತ್ತದೆ ಎಂದರೆ ಸರಿಯಲ್ಲ. ಈ ಬಗ್ಗೆ ದಿನಾಂಕ 04.02.2021 ಪೊಲೀಸರು ನನ್ನನ್ನು ವಿಚಾರಣೆ ಮಾಡಿ

ಹೇಳಿಕೆ ಪಡೆದುಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಆರೋಪಿತರು ನನ್ನ ಗಂಡ ಮತ್ತು ಮಗನಾದ ಕಾರಣ ಅವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಪಾಟೀ ಸವಾಲು :</u> ಆರೋಪಿ ಪರ : ಶ್ರೀ ಎ ಎಸ್ ಎಂ ವಕೀಲರಿಂದಃ ಏನು ಇಲ್ಲ.

ಮರುವಿಚಾರಣೆ ಃ ಇಲ್ಲ

ನನ್ನ ಉಕ್ತಲೇಖನಾ ರೀತ್ಯಾಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓದಿ ಹೇಳಿ ಕೇಳಿ ಸರಿ ಇದೆ.

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರ.ದ.ನ್ಯಾದಂ. ಕಾರ್ಕಳ